**ಅಸಲು ದಾವ ಸಂಖ್ಯೆ:294/2013**

**ಪಿ.ಡಬ್ಲೂ -1**

ದಿಃ 05-01-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಹಿಂದಿ (ಮರಾಠಿ) ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಪಿ.ಕೆ.ಎಸ್. ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು 4 ಮತ್ತು 5 ನೇ ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.100/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.

**ಮುಂದುವರೆದ ಪಾಟೀ ಸವಾಲು 4 ಮತ್ತು 5 ನೇ ಪ್ರತಿವಾದಿಯರ ಪರವಾಗಿ ಶ್ರೀ ಎಸ್.ಬಿ.ಡಿ. ರವರಿಂದಃ-**

ನಾನು 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಮರಾಠಿ ಓದಲು ಮತ್ತು ಬರೆಯಲು ಬರುತ್ತದೆ. ನಾನು ಈ ದಾವೆಯನ್ನು ಸಲ್ಲಿಸಲು ನನ್ನ ವಕೀಲರಿಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ಈ ದಾವೆಯನ್ನು ವಾಟ್ನಿ ಸಲುವಾಗಿ ಸಲ್ಲಿಸಿರುತ್ತೇನೆ. ಈ ದಾವೆಯನ್ನು ಸರ್ವೆ ನಂ.4/1, 4/2, 4/3, 4/4, 4/5, 4/6, 4/7, 4/8 ಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುತ್ತೇನೆ. ಪ್ರತಿ ಸರ್ವೆ ನಂಬರಿನ ವಿಸ್ತೀರ್ಣ ಮತ್ತು ಚೆಕ್ಕುಬಂಧಿಯನ್ನು ಹೇಳಲು ಬರುತ್ತೆದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಒಟ್ಟು ವಿಸ್ತೀರ್ಣವನ್ನು ಹೇಳುತ್ತೇನೆ ಎಂದು ನುಡಿಯುತ್ತಾರೆ. ಒಟ್ಟು ವಿಸ್ತೀರ್ಣ 9 ಎಕರೆ 10 ಗುಂಟೆ. ಅದರ ಚೆಕ್ಕುಬಂಧಿ ಹೇಳಲು ಬರುವುದಿಲ್ಲ. ಪ್ರತಿ ಸರ್ವೆ ನಂಬರಿನ ವಿಸ್ತೀರ್ಣ ಮತ್ತು ಚೆಕ್ಕುಬಂಧಿಯನ್ನು ಹೇಳಲು ಬರುವುದಿಲ್ಲ. ನೀವು ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಯನ್ನು ಓದಿ ತಿಳಿದುಕೊಂಡು ಹಾಜರುಪಡಿಸಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಬೇರೆಯವರಿಂದ ಓದಿಸಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ಸರ್ವೆ ನಂಬರ್ 4/3 ರ ವಿಸ್ತೀರ್ಣ 20 ಗುಂಟೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಸದರಿ ಜಮೀನಿನ ಚೆಕ್ಕುಬಂಧಿಯನ್ನು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸರ್ವೆ ನಂ.4/3 ರಲ್ಲಿ 20 ಗುಂಟೆ ಜಮೀನು ಇದೆ ಎಂದು ತೋರಿಸಲು ನಾನು ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸರ್ವೆ ನಂ.4/3 ರಲ್ಲಿ 20 ಗುಂಟೆ ಜಮೀನು ಇದೆ ಎಂದು ವಾದ ಪತ್ರದಲ್ಲಿ ತಪ್ಪಾಗಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

**2.** 4 ಮತ್ತು 5 ನೇ ಪ್ರತಿವಾದಿಯರು ಸ್ವಂತ ಅಣ್ಣ ತಮ್ಮಂದಿರು ಎಂದರೆ ಸರಿ. ಸದರಿಯವರ ತಂದೆ ಹೆಸರು ಗುಡ್ಡಪ್ಪ. ನನ್ನ ವಾದ ಪತ್ರದಲ್ಲಿ 4 ನೇ ಪ್ರತಿವಾದಿಯ ತಂದೆಯ ಹೆಸರು ಬಾಳಪ್ಪ ಸಾವಂತ್ ಎಂದು ತಪ್ಪಾಗಿ ನಮೂದು ಆಗಿರುತ್ತದೆ. ನನಗೆ 4 ಮತ್ತು 5 ನೇ ಪ್ರತಿವಾದಿಯರ ಪರಿಚಯ ಇಲ್ಲ, ಆದ್ದರಿಂದಲೇ ಅವರ ತಂದೆಯ ಹೆಸರನ್ನು ತಪ್ಪಾಗಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಸಲ್ಲಿಸಿರುವ ತಕರಾರು ಪತ್ರದಲ್ಲಿ ಏನು ಹಾಕಿರುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ. ಪ್ರತಿವಾದಿಯರು ಹಾಜರುಪಡಿಸಿರುವ ದಾಖಲೆಗಳನ್ನು ನಾನು ಓದಿಸಿ ತಿಳಿದುಕೊಂಡಿಲ್ಲ. ನಿಪಿ-12 ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ 7 ನೇ ಪುಟ ಸಂಖ್ಯೆಯಲ್ಲಿ ಕಾಣಿಸುತ್ತಿರುವ ಎರಡನೇ ಭಾವಚಿತ್ರವು ಶ್ರೀಪತಿ ಕುಲ್ಲಂ ಎನ್ನುವವರದ್ದು ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ಪುಟ ಸಂಖ್ಯೆಯಲ್ಲಿ 3 ನೇ ಭಾವಚಿತ್ರವನ್ನು ಸಾಕ್ಷಿಗೆ ತೋರಿಸಲಾಗಿ ಸದರಿ ಭಾವಚಿತ್ರವು ಲಕ್ಷ್ಮಿಬಾಯಿ ಶ್ರೀಪತಿ ಕುಲ್ಲಂ ಎನ್ನುವವರದ್ದು ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ಲಕ್ಷ್ಮಿಬಾಯಿ ಶ್ರೀಪತಿ ಕುಲ್ಲಂ ರವರು ಈ ದಾವೆಯಲ್ಲಿ ಒಬ್ಬ ಪ್ರತಿವಾದಿಯಾಗಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ನಿಪಿ-12 ನ್ನು ತೋರಿಸಲಾಗಿ ಅದರಲ್ಲಿ 8 ನೇ

ಪುಟದಲ್ಲಿ ಕ್ರಮ ಸಂಖ್ಯೆ 3 ರಲ್ಲಿ ಇರುವ ಭಾವಚಿತ್ರವು ಸಿದ್ದು ಶ್ರೀಪತಿ ಕುಲ್ಲಂ ಎನ್ನುವವರದ್ದು ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿ ಕೊಂಡಿರುತ್ತಾರೆ. ಸದರಿಯವರು ಈ ದಾವೆಯಲ್ಲಿ ಒಬ್ಬ ಪ್ರತಿವಾದಿಯಾಗಿರುತ್ತಾರೆ ಎಂದರೆ ಸರಿ. ಸದರಿಯವರನ್ನು ಸಿದ್ದವ್ವ ಎಂದೂ ಸಹ ಕರೆಯುತ್ತಾರೆ ಎಂದರೆ ಸರಿ. ಸದರಿ ದಾಖಲೆಯಲ್ಲಿ 8 ನೇ ಪುಟದಲ್ಲಿ ಕ್ರಮ ಸಂಖ್ಯೆ 4 ರಲ್ಲಿರುವ ಭಾವಚಿತ್ರವು ಅನುಸೂಯ ಅಂದರೆ 15 ನೇ ಪ್ರತಿವಾದಿಯದ್ದು ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಯಲ್ಲಿ 8 ನೇ ಪುಟದಲ್ಲಿ ಕ್ರಮ ಸಂಖ್ಯೆ 5 ರಲ್ಲಿರುವ ಭಾವಚಿತ್ರವು ಶಾಂತ ಅಂದರೆ 16 ನೇ ಪ್ರತಿವಾದಿಯದ್ದು ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಯಲ್ಲಿ 8 ನೇ ಪುಟದಲ್ಲಿ ಕ್ರಮ ಸಂಖ್ಯೆ 6 ರಲ್ಲಿರುವ ಭಾವಚಿತ್ರವು ಮಾಲು ಎನ್ನುವವರದ್ದು ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿಯವರನ್ನು ಜೀಜಾ ಎಂದೂ ಸಹ ಕರೆಯುತ್ತಾರೆ ಎಂದರೆ ಸರಿ.

**3.** ನಿಪಿ-12 ರಲ್ಲಿ ಪೂರ್ವಕ್ಕೆ ನಮೂದಿಸಿರುವ ಚೆಕ್ಕುಬಂಧಿಯಲ್ಲಿ ಬೂಡಪ್ಪ ನಾಗೋಜಿ ಸಾವಂತ್ ಎಂದು ನಮೂದಿಸಿದ್ದು ಸದರಿಯವರು 4 ಮತ್ತು 5 ನೇ ಪ್ರತಿವಾದಿಯರ ತಂದೆ ಎಂದರೆ ಸರಿ. ಶ್ರೀಪತಿ ಕುಲ್ಲಂ ರವರು 2012 ರಂದು ಮರಣ ಹೊಂದಿರುತ್ತಾರೆ, ನಿಖರವಾಗಿ ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ. ಆತನು ವಯಸ್ಸಾಗಿ ಮರಣ ಹೊಂದಿರುತ್ತಾನೆ. ಆತನು ಮರಣ ಹೊಂದಿದ ಸಮಯದಲ್ಲಿ ಆತನ ವಯಸ್ಸು 90 ವರ್ಷ ವಯಸ್ಸು ಆಗಿತ್ತು ಎಂದರೆ ಸಾಕ್ಷಿಯು 90 ವರ್ಷದ ಒಳಗೆ ಆಗಿತ್ತು ಎಂದು ನುಡಿಯುತ್ತಾರೆ. ಆತನು ಮರಣ ಹೊಂದುವ ಸಮಯದಲ್ಲಿ ಆತನ ವಯಸ್ಸು 84 ಅಥವಾ 85 ಇತ್ತು. ಸದರಿ ಶ್ರೀಪತಿ ಕುಲ್ಲಂ ರವರು ಎಷ್ಟು ವಿದ್ಯಾಭ್ಯಾಸ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿಯವರು ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರು. ಅವರು ಸಹಿ ಮಾಡುವುದನ್ನು ನಾನು ಯಾವತ್ತೂ ನೋಡಿಲ್ಲ. ಶ್ರೀಪತಿ ಕುಲ್ಲಂ ರವರ ಮರಣ ಪ್ರಮಾಣ ಪತ್ರವನ್ನು ನಾನು ತೆಗೆದುಕೊಂಡಿರುತ್ತೇನೆ. ಶ್ರೀಪತಿ ಕುಲ್ಲಂ ರವರ ವಾರಸಾ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ. 12 ರಿಂದ 16 ನೇ ಪ್ರತಿವಾದಿಯರನ್ನು ನಾನು ವಾದ ಪತ್ರದಲ್ಲಿ ಹೇಳಿರುವ ವಂಶವೃಕ್ಷದಲ್ಲಿ ತೋರಿಸಿಲ್ಲ ಎಂದರೆ ಸರಿ.

**4.** ಕಂಗ್ರಾಳಿ ಗ್ರಾಮದಿಂದ ಬಾಕನೂರು ಗ್ರಾಮಕ್ಕೆ 35 ರಿಂದ 40 ಕಿಲೋ ಮೀಟರ್ ಅಂತರ ಇದೆ ಎಂದರೆ ಸರಿ. ಕಂಗ್ರಾಳಿ ಗ್ರಾಮದಿಂದ ಬಾಕನೂರು ಗ್ರಾಮಕ್ಕೆ ಹೋಗುವಾಗ ಬೆಳಗುಂದಿ ಗ್ರಾಮದ ಮೂಲಕ ಹೋಗಬೇಕು ಎಂದರೆ ಸರಿ. ಬಾಕನೂರು ಗ್ರಾಮದಲ್ಲಿ ಯಾವುದೂ ಸೊಸೈಟಿ ಮತ್ತು ಬ್ಯಾಂಕ್ ಇಲ್ಲ ಎಂದರೆ ಸರಿ. ಬೆಳಗುಂದಿ ಗ್ರಾಮದಲ್ಲಿ ಸಿಂಡಿಕೇಟ್ ಎಂಬ ಬ್ಯಾಂಕ್ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಬಾಕನೂರು ಗ್ರಾಮದ ರೈತು ಕೃಷಿ ಸಾಲಗಳನ್ನು ತೆಗೆದುಕೊಳ್ಳಬೇಕೆಂದರೆ ಬೆಳಗುಂದಿ ಸಿಂಡಿಕೇಟ್ ಬ್ಯಾಂಕಿನಲ್ಲಿ ತೆಗೆದುಕೊಳ್ಳುತ್ತಾರೆ ಎಂದರೆ ಸರಿ.

ಶ್ರೀಪತಿ ಕುಲ್ಲಂ ರವರು ಉಳಿತಾಯ ಖಾತೆ ಮತ್ತು ಸಾಲದ ಖಾತೆಯನ್ನು ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ.

**5.** ಈ ಹಂತದಲ್ಲಿ ವಕೀಲರು 2, 6 ರಿಂದ 11 ನೇ ಪ್ರತಿವಾದಿಯರ ಪರ ವಕೀಲರು ದಿನಾಂಕ 09.04.2019 ರಂದು ಮಾಡಿರುವ ಪಾಟೀ ಸವಾಲಿನಲ್ಲಿ ಪ್ಯಾರಾ ಸಂಖ್ಯೆ 1, ಪ್ಯಾರಾ ಸಂಖ್ಯೆ 3 ಮತ್ತು ದಿನಾಂಕ 0606.2019 ರಂದು 3 ನೇ ಪ್ರತಿವಾದಿಯ ಪರ ವಕೀಲರು ಮಾಡಿರುವ ಪಾಟೀ ಸವಾಲಿನಲ್ಲಿ ಪುಟ ಸಂಖ್ಯೆ 1 ರಿಂದ 3 ನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**